# ಉಪನಿರ್ದೇಶಕರು (ಗ್ರಾ.ಕೈ) ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ಹಾಸನ.

ಸಂ: ಜಿಪಂಹಾ/ಉನಿ(ಗ್ರಾ.ಕೈ)/ಎ1ಅ.ಸೂ/2025-26.

ದಿನಾಂಕ:-25-06-2025.

-: **ಅಧಿಸೂಚನೆ** :-

ಉಪನಿರ್ದೇಶಕರು (ಗ್ರಾ.ಕೈ) ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ಹಾಸನ ರವರ ಕಛೇರಿ ವತಿಯಿಂದ 2025-26 ನೇ ಸಾಲಿನ ಜಿಲ್ಲಾ ಔದ್ಯಮಿಕ ಕೇಂದ್ರ ಯೋಜನೆ ಹಾಗೂ ವೃತ್ತಿಪರ ಕುಶಲಕರ್ಮಿಗಳ ಯೋಜನೆಯಡಿ ಈ ಕೆಳಕಂಡಂತೆ ವೃತ್ತಿ ನಿರ್ವಹಿಸುತ್ತಿರುವ ಕುಶಲಕರ್ಮಿಗಳಿಂದ ಅರ್ಜಿಗಳನ್ನು ದಿನಾಂಕ: 07-07-2025 ರಿಂದ 31-08-2025 ರ ವರೆಗೆ ವೆಬ್ ಸೈಟ್ www.hassan.nic.in ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ಕಾರ್ಯಕ್ರಮಗಳ ವಿವರ | ಉಪಕರಣಗಳು | ಗುರಿ |
|---|---|---|---|
| 1 | 2851-00-107-0-27<br>ಜಿಲ್ಲಾ ಔದ್ಯಮಿಕ ಕೇಂದ್ರ ಯೋಜನೆ | ವಿದ್ಯುತ್ ಚಾಲಿತ ಹೊಲಿಗೆಯಂತ್ರಗಳು | 300 |
| 2 | 2851-00-107-0-32<br>ವೃತ್ತಿ ನಿರತ ಕುಶಲ ಕರ್ಮಿಗಳಿಗೆ ಸುದಾರಿತ ಉಪಕರಣಗಳ ವಿತರಣೆ ಯೋಜನೆ | ಮರಗೆಲಸ<br>ಗಾರೆಕೆಲಸ<br>ದೋಬಿ<br>ಕ್ಷೌರಿಕ<br>ಎಲೆಕ್ಟ್ರಿಕಲ್ ಟೂಲ್‌ಕಿಟ್<br>ಬೋರ್‌ಬೇಲ್ ರಿಪೇರಿ/ಮೋಟರ್ ವೈಂಡಿಂಗ್.<br>ವಿದ್ಯುತ್ ಚಾಲಿತ ಹೊಲಿಗೆಯಂತ್ರ. | 500 |

**ಅರ್ಹತೆಗಳು:**

- ಜಿಲ್ಲಾ ಔದ್ಯಮಿಕ ಕೇಂದ್ರ ಯೋಜನೆ **ವಿದ್ಯುತ್ ಚಾಲಿತ ಹೊಲಿಗೆಯಂತ್ರ** ಪಡೆಯುವುದಕ್ಕಾಗಿ ಹಾಸನ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ **ಮಹಿಳಾ** ಅಭ್ಯರ್ಥಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
- ವೃತ್ತಿ ಪರ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ವಿತರಣೆ ಯೋಜನೆಯಡಿ **ವಿದ್ಯುತ್ ಚಾಲಿತ ಹೊಲಿಗೆಯಂತ್ರ**, ಪಡೆಯಲು ಹಾಸನ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ **ಪುರುಷ ಮತ್ತು ಮಹಿಳಾ** ಅಭ್ಯರ್ಥಿಗಳು ಅರ್ಜಿ ಸಲ್ಲಿಸತಕ್ಕದ್ದು.
- ಒಂದು ಕುಟುಂಬಕ್ಕೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು. ಜಿಲ್ಲಾ ಔದ್ಯಮಿಕ ಕೇಂದ್ರ ಯೋಜನೆಯಡಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ವೃತ್ತಿ ನಿರತ ಕುಶಕರ್ಮಿಗಳಿಗೆ ಸುದಾರಿತ ಉಪಕರಣಗಳ ವಿತರಣೆ ಯೋಜನೆಯಡಿ **ವಿದ್ಯುತ್ ಚಾಲಿತ ಹೊಲಿಗೆಯಂತ್ರಕ್ಕೆ** ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿ ಸಲ್ಲಿಸಿದ್ದಲ್ಲಿ 02 ಕಡೆ ಅರ್ಜಿ ತಿರಸಕೃತಗೊಳ್ಳುತ್ತದೆ.
- **ಮರಗೆಲಸ, ಗಾರೆಕೆಲಸ, ದೋಬಿ, ಕ್ಷೌರಿಕ, ಎಲೆಕ್ಟ್ರಿಕಲ್ ಟೂಲ್‌ಕಿಟ್, ಹಾಗೂ ಬೋರ್‌ಬೇಲ್ ರಿಪೇರಿ/ಮೋಟರ್ ವೈಂಡಿಂಗ್ ಉಪಕರಣಗಳನ್ನು** ಪಡೆಯುವುದಕ್ಕಾಗಿ ಹಾಸನ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಪುರುಷ ಕುಶಲಕರ್ಮಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
- ಮರಗೆಲಸ, ಗಾರೆಕೆಲಸ, ಎಲೆಕ್ಟ್ರಿಕಲ್ ಟೂಲ್‌ಕಿಟ್, ವಿದ್ಯುತ್ ಚಾಲಿತ ಹೊಲಿಗೆಯಂತ್ರ ಹಾಗೂ ಬೋರ್‌ಬೇಲ್ ರಿಪೇರಿ/ಮೋಟರ್ ವೈಂಡಿಂಗ್ ಉಪಕರಣಗಳನ್ನು ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯ **ವಯಸ್ಸು ಕನಿಷ್ಠ 18 ವರ್ಷ ಹಾಗೂ ಗರಿಷ್ಠ 55 ವರ್ಷಗಳು** ಇರತಕ್ಕದ್ದು.
- ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಆನ್‌ಲೈನ್‌ನಲ್ಲಿ www.hassan.nic.in ವೆಬ್‌ಸೈಟ್ ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.

**ಈ ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ನೀಡುವುದು.**

1) ಪಾಸ್ಪೋರ್ಟ್ ಗಾತ್ರದ ಭಾವಚಿತ್ರ.
2) ಆಧಾರ್ ಕಾರ್ಡ್/ಮತದಾರರ ಗುರುತಿನ ಚೀಟಿ.
3) ಜನ್ಮ ದಿನಾಂಕ ನಮೂದಿಸಿರುವ ದಾಖಲೆ (ವರ್ಗಾವಣೆ ಪ್ರಮಾಣ ಪತ್ರ/ಎಸ್.ಎಸ್.ಎಲ್.ಸಿ., ಅಂಕಪಟ್ಟಿ/ ಇನ್ನಿತರ ಪ್ರಮಾಣ ಪತ್ರ)
4) ಯಾವುದೇ ಸರ್ಕಾರಿ ಇಲಾಖೆಗಳಡಿ ತರಬೇತಿ ಪಡೆದಿದ್ದರೆ ತರಬೇತಿ ಪ್ರಮಾಣ ಪತ್ರ.
5) ಜಾತಿ ಪ್ರಮಾಣ ಪತ್ರ.
6) ಬಿ.ಪಿ.ಎಲ್./ಎ.ಪಿ.ಎಲ್. ಪಡಿತರ ಚೀಟಿ.
7) ಆಯಾ ಗ್ರಾಮ ಪಂಚಾಯತಿಯ, ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಂದ ವೃತ್ತಿ ಮಾಡುತ್ತಿರುವ ಬಗ್ಗೆ ದೃಢೀಕರಣ ಪತ್ರ ನೀಡುವುದು ಅಥವಾ ಕಾರ್ಮಿಕ ಇಲಾಖೆಯಿಂದ ಕಾರ್ಮಿಕ ಪ್ರಮಾಣ ಪತ್ರ. (ಟೈಲರಿಂಗ್, ಮರಗೆಲಸ, ಗಾರೆಕೆಲಸ, ದೋಬಿ, ಕ್ಷೌರಿಕ, ಎಲೆಕ್ಟ್ರಿಕಲ್ ರಿಪೇರಿ, ಬೋರ್‌ಬೇಲ್ ರಿಪೇರಿ/ಮೋಟರ್ ವೈಂಡಿಂಗ್).

- ತಾಲ್ಲೂಕುವಾರು ಹಾಗೂ ಪ್ರವರ್ಗವಾರು ಗುರಿಯನ್ನು ನಿಗದಿಪಡಿಸಿಕೊಳ್ಳಲಾಗುವುದು.
- **ಆಯ್ಕೆ ಪ್ರಕ್ರಿಯೆ:** ನಿಗದಿಪಡಿಸಿರುವ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು(ಗ್ರಾಮೀಣ ಕೈಗಾರಿಕೆ) ರವರ ಕಛೇರಿ, ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿ ಕಟ್ಟಡ, ಡೈರಿ ಸರ್ಕಲ್, ಹಾಸನ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ: 08172-240651.

ಉಪನಿರ್ದೇಶಕರು(ಗ್ರಾ.ಕೈ)
ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ,
ಹಾಸನ.

ಉಪನಿರ್ದೇಶಕರು (ಗ್ರಾ.ಕೈ)
ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ
ಹಾಸನ